**ದಿನಾಂಕಃ 05.08.2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.**

**<u>ಮುಂದುವರೆದ ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ</u>**

REMCO ಸೊಸೈಟಿರವರು ಬಡಾವಣೆಯನ್ನು ಮಾಡಿದ ನಂತರ ಸರ್ವೋಚ್ಛ ನ್ಯಾಯಾಲಯದ ಆದೇಶದಂತೆ ಭೂಮಿಯನ್ನು ಸರ್ಕಾರಕ್ಕೆ ಬಿಟ್ಟುಕೊಟ್ಟಿಲ್ಲ ಎಂದರೆ ಸರಿಯಲ್ಲ. ಸರ್ವೋಚ್ಛ ನ್ಯಾಯಾಲಯದ ಆದೇಶವಾದ ನಂತರ REMCO ಸೊಸೈಟಿ ಹಾಗೂ ಭೂಮಿಯ ಮಾಲೀಕರ ಮಧ್ಯೆ ಒಪ್ಪಂದ ಏರ್ಪಟ್ಟು ಅದರಂತೆ REMCO ಸೊಸೈಟಿ ರವರೇ ಭೂಮಿಯನ್ನು ಅವರ ಬಳಿ ಇಟ್ಟುಕೊಂಡಿದ್ದರು ಎಂದರೆ ಸರಿಯಲ್ಲ. W.P.No.14665/2012 ರಲ್ಲಿ ನಾನು 17 ನೇ ಎದುರುದಾರ ಎಂದರೆ ಸರಿ. ಸದರಿ ರಿಟ್ ಅರ್ಜಿಯ ಮೇಲಿನ ಆದೇಶದ ಪ್ರಕಾರ ಬಿಬಿಎಂಪಿ ರವರು ನಿವೇಶನಗಳ ಹಂಚಿಕೆದಾರರ ಹೆಸರಿಗೆ ಖಾತೆಗಳನ್ನು ಪುನರ್ ಸ್ಥಾಪಿಸಿದರು ಎಂದರೆ ಸರಿಯಲ್ಲ. ರಿಟ್ ಅರ್ಜಿ ಸಂ.14665/2012 ರ ಆದೇಶದ ವಿರುದ್ಧ ನಾನು ಮೇಲ್ಮನವಿ ಸಲ್ಲಿಸಿದ್ದೆನು. ಸದರಿ ಮೇಲ್ಮನವಿ ವಜಾ ಆಗಿರುತ್ತದೆ ಎಂದರೆ ಸರಿಯಲ್ಲ. ರಿಟ್ ಅರ್ಜಿ ಸಂ.14665/2012 ರ ಆದೇಶದ ವಿರುದ್ಧ ಸಲ್ಲಿಸಿದ್ದ ಮೇಲ್ಮನವಿಯ ಆದೇಶವನ್ನು ಪ್ರಶ್ನಿಸಿ ನಾನು ಸರ್ವೋಚ್ಛ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿಲ್ಲ, 1 ನೇ ಪ್ರತಿವಾದಿ ಸಲ್ಲಿಸಿರುತ್ತಾರೆ, ಅದರಲ್ಲಿ ನಾನು ಸಹಾ ಪಕ್ಷಗಾರನಿದ್ದೇನೆ.

ಮೂಲ ದಾವೆ ಸಂ.3519/2012 ನನ್ನ ವಿರುದ್ಧ ಡಿಕ್ರಿಯಾಗಿರುತ್ತದೆ ಎಂದರೆ ಸರಿ. ಸದರಿ ತೀರ್ಪನ್ನು ನಾನು ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ಸದರಿ ಮೇಲ್ಮನವಿಯಲ್ಲಿ ದಾವೆ ಪುನಃ ವಿಚಾರಣಾ ನ್ಯಾಯಾಲಯಕ್ಕೆ ವಾಪಸ್ಸು ಆಗಿರುತ್ತದೆ.

ಮೂಲ ದಾವೆ ಸಂ.3519/2012 ರ ತೀರ್ಪಿನ ವಿರುದ್ಧ ನಾನು ಯಾವುದೇ ಮೇಲ್ಮನವಿಯನ್ನು ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ಸದರಿ ದಾವೆಯಲ್ಲಿ ನಾನು ಬಿ ಹೆಚ್ ಇ ಎಲ್ ಬಡಾವಣೆಯನ್ನು 20 ವರ್ಷಗಳ ಹಿಂದಿನಿಂದ ನೋಡಿದ್ದೆನು, ಅವುಗಳಲ್ಲಿ 500-600 ಕ್ಕೂ ಹೆಚ್ಚು ಮನೆಗಳು ಬಂದಿದ್ದು 1400 ಮನೆಗಳು ಆಗದೇ ಇದ್ದು ಆ ಮನೆಗಳನ್ನು ಬಿ ಹೆಚ್ ಇ ಎಲ್ ನ ಉದ್ಯೋಗಿಗಳು ಕಟ್ಟಿರುತ್ತಾರೆ ಹಾಗೂ ನಿವೇಶನಗಳನ್ನು ಬಿ ಹೆಚ್ ಇ ಎಲ್ ಗೃಹ ನಿರ್ಮಾಣ ಸಹಕಾರ ಸಂಘದ ಸದಸ್ಯರಿಗೆ ಹಂಚಿಕೆ ಮಾಡಿರುತ್ತಾರೆ ಎಂದು ಒಪ್ಪಿಕೊಂಡಿದ್ದೆನು ಎಂದರೆ ಸರಿಯಲ್ಲ. ನಾನು ಮೂಲ ದಾವೆ ಸಂ.3519/2012 ರ ತೀರ್ಪಿನ ವಿರುದ್ಧ ಸಲ್ಲಿಸಿದ ಆರ್ ಎಫ್ ಎ ಸಂ.717/2014 ರ ಮೇಲ್ಮನವಿಯನ್ನು ದಿನಾಂಕ 10.10.2014 ರಂದು ಹಿಂಪಡೆದಿರುತ್ತೇನೆ ಎಂದರೆ ಸಾಕ್ಷಿ ನುಡಿಯುತ್ತಾರೆ ನನ್ನ ಜಾಗ ಸರ್ವೆ ನಂ.42/3 ಬಿ ಸ್ವತ್ತಿನಲ್ಲಿ ಬರುವುದಿಲ್ಲವೆಂದು ಗೊತ್ತಾದ ನಂತರ ಹಿಂಪಡೆದಿರುತ್ತೇನೆ. ಮಾನ್ಯ ಸರ್ವೋಚ್ಛ ನ್ಯಾಯಾಲಯದ ಆದೇಶದಂತೆ REMCO ಸೊಸೈಟಿರವರು ಸ್ವತ್ತುಗಳನ್ನು ಸರ್ಕಾರಕ್ಕೆ ವಾಪಸ್ಸು ನೀಡಿದ ಬಗ್ಗೆ ನಾನು ಯಾವುದೇ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. REMCO ಸೊಸೈಟಿ ರವರು ಜಮೀನುಗಳನ್ನು ಸರ್ಕಾರಕ್ಕೆ ವಾಪಸ್ಸು ನೀಡಿದ ಬಗ್ಗೆ ನಾನು ಕೇವಲ REMCO ಸೊಸೈಟಿ ಹಾಗೂ ವಿಶೇಷ ಭೂ ಸ್ವಾಧೀನಾಧಿಕಾರಿಯವರ ಮಧ್ಯೆ ಆಗಿದ್ದ ಪತ್ರ ವ್ಯವಹಾರಗಳನ್ನು ಮಾತ್ರ ಅವಲಂಬಿಸಿದ್ದು ಬೇರೆ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಿಪಿ-37 ರ ಒಪ್ಪಂದದ ಪ್ರಕಾರ REMCO ಸೊಸೈಟಿ ರವರು ವಿಶೇಷ ಭೂ ಸ್ವಾಧೀನಾಧಿಕಾರಿಯವರಿಗೆ ಪತ್ರ ವ್ಯವಹಾರ ಮಾಡಿರುತ್ತಾರೆ ಎಂದರೆ ಸರಿಯಲ್ಲ.

ಮೂಲ ದಾವೆ ಸಂ.4460/2022 ನ್ನು ನಾನು REMCO ಸೊಸೈಟಿ ರವರು ಹಂಚಿಕೆ ಮಾಡಿದ್ದ ನಿವೇಶನದಾರರ ವಿರುದ್ಧ ಸಲ್ಲಿಸಿದ್ದೇನೆ ಎಂದರೆ ಸರಿ. ಸದರಿ ದಾವೆಯನ್ನು ನಾನು ರಾಜೀ ಮಾಡಿಕೊಂಡಿದ್ದು ನಾನು ಈಗ ನೋಡುತ್ತಿರುವ ದಾಖಲೆ ಅದರಲ್ಲಿನ ಡಿಕ್ರಿಯ ನಕಲು ಎಂದರೆ ಸರಿ.

**ನ್ಯಾಯಾಲಯದ ಸಮಯ ಮುಗಿದ ಕಾರಣ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಗಿದೆ )

ಓ.ಹೇ.ಕೇ. ಸರಿ.ಇದೆ.

**(ವೇದ ಮೂರ್ತಿ ಬಿ.ಎಸ್)**
(ಪ್ರಭಾರ) 5 ನೇ ಅಪರ ನಗರ ಸಿವಿಲ್ ಮತ್ತು
ಸತ್ರ ನ್ಯಾಯಾಧೀಶರು, ಬೆಂಗಳೂರು.